**ಗ್ರಾಮೀಣ ಪ್ರದೇಶಗಳಲ್ಲಿ ಈಜುಕೊಳ ನಿರ್ಮಾಣ**

**279 (2080) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ)** – ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕೆರೆ ಕುಂಟೆಗಳು ಬತ್ತಿ ಹೋಗಿ ಅಲ್ಲಿನ ಯುವಕರಿಗೆ ಈಜು ಕಲಿಯಲು ಇದ್ದ ಅವಕಾಶದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ನಗರ ಪ್ರದೇಶಗಳಲ್ಲಿ ಪ್ರತಿಷ್ಟಿತ ಜನರಿಗೆ ಈಜು ಕಲಿಯಲು ಸುವ್ಯವಸ್ಥಿತ ಈಜು ಕೊಳಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ತಾರತಮ್ಯವನ್ನು ಹೋಗಲಾಡಿಸಲು ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ ಪ್ರತಿ ಪಂಚಾಯಿತಿ ಕೇಂದ್ರಗಳಲ್ಲಿ ಈಜು ಕೊಳಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಸಾಧ್ಯವಿದೆಯೇ,

ಇ) ಹಾಗಿದ್ದಲ್ಲಿ, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಬೇಕಾಗಿರುವ ಕಾಲಾವಕಾಶ ಎಷ್ಟು?

**ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)** –

ಅ) ಹೌದು

ಆ) ಈ ಕೆಳಕಂಡ ಸಂಕ್ಷಿಪ್ತ ವಿವರಗಳಂತೆ ನಗರ ಪ್ರದೇಶಗಳಲ್ಲಿ ಈಜುಕೊಳಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ ನಗರ ಪ್ರದೇಶಗಳಲ್ಲಿ ರಾಜ್ಯದ 10 ನಗರಗಳಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ನಗರ ಪಾಲಿಕೆಗಳು/ನಗರ ಸಭೆಗಳು, ವಿಶ್ವವಿದ್ಯಾನಿಲಯಗಳು, ಮುಂತಾದ ವಿದ್ಯಾ ಸಂಸ್ಥೆಗಳು ಇವರುಗಳಿಂದ ನಿರ್ಮಿಸಿ ನಿರ್ವಹಿಸಲ್ಪಡುತ್ತಿರುವ ಈಜುಕೊಳಗಳಿವೆ ಈಜುಕೊಳಗಳಿಗೆ ಅವುಗಳ ನಿರ್ವಹಣೆಗಾಗಿ ಪ್ರವೇಶ ಶುಲ್ಕವನ್ನು ಪಡೆದು ಸಂಬಂಧಿಸಿದ ಪ್ರಾಧಿಕಾರಗಳು ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಿರುತ್ತವೆ ಆದ್ದರಿಂದ, ನಗರ ಪ್ರದೇಶಗಳಲ್ಲಿ ಪ್ರತಿಷ್ಟಿತ ಜನರಿಗೆ ಮಾತ್ರ ಈ ಈಜುಕೊಳಗಳು ಸೀಮಿತವಾಗಿರುವುದಿಲ್ಲ

ಪ್ರತಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಈಜುಕೊಳವನ್ನು ನಿರ್ಮಿಸುವುದು ಪ್ರಸ್ತುತ ಇರುವ ಸೀಮಿತ ಆಯವ್ಯಯದಲ್ಲಿ ಕಷ್ಟಸಾಧ್ಯವಾಗಿರುತ್ತದೆ

ಇ) ಮೇಲೆ ವಿವರಿಸಿದ ಕಾರಣಗಳಿಂದ ಸದ್ಯಕ್ಕೆ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಈಜುಕೊಳ ನಿರ್ಮಾಣದ ಅನುಷ್ಠಾನಕ್ಕೆ ಕಾಲಾವಕಾಶ ನಿಗಧಿಗೊಳಿಸುವುದು ಸಾಧ್ಯವಾಗುವುದಿಲ್ಲ

**ಶ್ರೀ ಕೆ ಆರ್ ರಮೇಶ್‌ಕುಮಾರ್** – ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿರುತ್ತಾರೆ ಪ್ರಶ್ನೆಯನ್ನು ಪೂರ್ಣವಾಗಿ ಗಮನಿಸಿದ ಹಾಗೇ ಇಲ್ಲ ನಗರ ಪ್ರದೇಶಗಳಲ್ಲಿ ಪ್ರತಿಷ್ಠಿತ ಜನರಿಗೆ ಈಜು ಕಲಿಯಲು ಸುವ್ಯವಸ್ಥಿತ ಈಜು ಕೊಳಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುತ್ತೇನೆ ಸೆಂಚ್ಯೂರಿ ಕ್ಲಬ್, ಪ್ರೆಸ್ ಕ್ಲಬ್, ವೆಸ್ಟೆಂಡ್ ಹೋಟೆಲ್, ಅಶೋಕ ಹೋಟೆಲ್, ವಿಂಡ್ಸರ್ ಮ್ಯಾನರ್ ಬಗ್ಗೆ ನಾನು ಹೇಳುವುದಿಲ್ಲ ನಗರದ ಪ್ರತಿಷ್ಠಿತ ಜನರು ಯಾರಿದ್ದಾರೆ ಅವರಿಗೆ ಅನುಕೂಲವಿದೆ ಕಾರ್ಪೊರೇಶನ್‌ದ್ದು ಬೇರೆ ಅಲ್ಲೊಂದು ಇಲ್ಲೊಂದು ಇವೆ ಅಲ್ಲಿಗೆ ಬಡವರ ಮಕ್ಕಳು ಹೋಗುತ್ತಾರೆ, ಹಳ್ಳಿಗಳಲ್ಲಿ ಶೂನ್ಯ ಹಳ್ಳಿಗಳಲ್ಲಿ ಕೆರೆ ಮತ್ತು ಕುಂಟೆಗಳು ಬತ್ತಿ ಹೋದವು, ನಾವು ಎಲ್ಲರೂ ಕೆರೆಯಲ್ಲಿ ಈಜು ಕಲಿತವರು ಕನಿಷ್ಟ ಪಂಚಾಯಿತಿ ಹೆಡ್‌ಕ್ವಾರ್ಟರ್ಸ್‌ನಲ್ಲಿಯಾದರೂ ಒಂದು ಈಜುಕೊಳವನ್ನು ಪ್ರಾರಂಭ ಮಾಡುವುದಕ್ಕೆ ಆಗುತ್ತದೆಯೇ ಎಂದು ನಾನು ಪ್ರಶ್ನೆಯನ್ನು ಕೇಳಿದೆ ನೀವು ಮಂತ್ರಿಗಳಾಗಿದ್ದವರು, ನಿಮ್ಮ ಅಧಿಕಾರಗಳು ಕೊಟ್ಟಿರುವ ಉತ್ತರವನ್ನು ನೀವು ಕೊಟ್ಟರೆ, ನಾನು ಏನು ಹೇಳಬೇಕು? ಇದು ಮಂತ್ರಿಗಳ ಉತ್ತರವೇ? ಹನುಮಂತಪ್ಪ ಆಲ್ಕೋಡ್‌ರವರ ಉತ್ತರವೇ? ನಾವು ಏಕೆ ತಮ್ಮಿಂದ ನಿರೀಕ್ಷಯೆನ್ನು ಮಾಡುತ್ತೇವೆಂದರೆ, ಪ್ರತಿಯೊಬ್ಬ ಮನುಷ್ಯನಿಗೆ ತನ್ನದೆ ಆದ ಹಿನ್ನೆಲೆ ಇರುತ್ತದೆ ನಿಮ್ಮಂಥವರು ಅಧಿಕಾರದ ಚುಕ್ಕಾಣೆಯನ್ನು ಹಿಡಿದಾಗ, ಒಂದು ಬದಲಾವಣೆಯನ್ನು ತರುತ್ತೀರಿ ಎನ್ನುವ ಆಶೆ ನಮಗೆ ಇರುತ್ತದೆ ನೀವು ಹೀಗೆ ಉತ್ತರವನ್ನು ಕೊಟ್ಟರೆ ಏನು ಪ್ರಯೋಜನ

**ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಕ್ರೀಡಾ ಸಚಿವರು)** – ಮಾನ್ಯ ಉಪಾಧ್ಯಕ್ಷರೆ, ನಾನು ಉತ್ತರವನ್ನು ಕೊಟ್ಟಿರುತ್ತೇನೆ ಮಾನ್ಯ ಹಿರಿಯರಾದ

ರಮೇಶ್‌ಕುಮಾರ್‌ರವರು ಪ್ರತಿ ಗ್ರಾಮ ಪಂಚಾಯಿತಿಗೊಂದು ಈಜುಕೊಳವನ್ನು ಮಾಡಬೇಕೆಂದು ಕೇಳಿದ್ದಾರೆ ಒಂದು ಸಂದರ್ಭದಲ್ಲಿ ಅವರೇ ಹೇಳಿದ್ದಾರೆ ಕೆರೆ, ಕುಂಟೆಗಳೆಲ್ಲಾ ಬತ್ತಿ ಹೋಗಿವೆ ಇವತ್ತು ಹಳ್ಳಿಗಾಡಿನಲ್ಲಿರತಕ್ಕಂಥವರ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎನ್ನತಕ್ಕಂಥದ್ದನ್ನು ಕೂಡ ಅವರು ಹೇಳಿದ್ದಾರೆ ಅದೇ ರೀತಿಯಲ್ಲಿ ನಾವು ಈಗಾಗಲೇ ಜಿಲ್ಲಾ ಕೇಂದ್ರಗಳಲ್ಲಿಯೇ ಮಾಡುವುದಕ್ಕೆ ನಮ್ಮಿಂದ ಆಗಿಲ್ಲ ರಾಜ್ಯದಲ್ಲಿ ಮೂರು ಕಡೆ ಮಾತ್ರ ನಾವು ನಮ್ಮ ಇಲಾಖೆಯಿಂದ ಮಾಡಿದ್ದೇವೆ ಇನ್ನೂ 17 ಜಿಲ್ಲೆಗಳಲ್ಲಿ ಮಾಡಬೇಕಾಗಿದೆ

**ಶ್ರೀ ಕೆ ಆರ್ ರಮೇಶ್‌ಕುಮಾರ್** – ಮಾನ್ಯ ಉಪಾಧ್ಯಕ್ಷರೆ, ಮಲ್ಯ ಹಾಸ್ಪಿಟಲ್, ವೋಕಾರ್ಡ್ ಆಸ್ಪತ್ರೆಗಳು ಶ್ರೀಮಂತರದ್ದು ಒಳ್ಳೆಯ ಹೋಟೆಲ್ ಅಂದರೆ ವಿಂಡ್ಸರ್ ಮ್ಯಾನರ್, ವೆಸ್ಟೆಂಡ್ ಇವು ಶ್ರೀಮಂತರದ್ದು ಬಡವರಿಗೆ ಬದುಕುವುದಕ್ಕೆ ಏನು ಅವಕಾಶವಿಲ್ಲ, ಅವರಿಗೆ ಏನೂ ಆಟವಿಲ್ಲ, ಪಾರವಿಲ್ಲ, ಸ್ವೀಮಿಂಗ್‌ಪೂಲ್ ಇಲ್ಲ, ಹೋಟೆಲ್ ಇಲ್ಲ, ಅವರು ಏಕೆ ಬದುಕಿರಬೇಕು, ನಮಗೆ ಓಟು ಹಾಕುವುದಕ್ಕೆಯೇ? ಸ್ವಲ್ಪ ಯೋಚನೆಯನ್ನು ಮಾಡಿ ನಮ್ಮಲ್ಲಿ ಕೆಲವು ಪ್ರಯಾರಿಟೀಸ್‌ಗಳನ್ನು ಮಾಡಿಕೊಳ್ಳಬಹುದು ನಾವು ಏನು ಸೌಭಾಗ್ಯವನ್ನು ಕೇಳಿದೆವು ಕುಡಿಯುವ ನೀರು ಬೇಕು, ಅದು ಬೇರೆ ಪ್ರಶ್ನೆ ಆ ವಿಷಯ ಬಂದಾಗ ಮಾತನಾಡೋಣ ಅವರು ಕಬಡ್ಡಿ ಅಥವಾ ಬೇರೆ ಆಟ ಆಡಿಕೊಳ್ಳುತ್ತಾರೆ, ಅವರು ಆಡುತ್ತಾರೆ, ಬೀಳುತ್ತಾರೆ, ಸಾಯುತ್ತಾರೆ ಈಜುಕೊಳ ಕೊಡುವುದಕ್ಕೆ ಯಾವುದೇ ಒಂದು ಫಂಡ್ಸ್‌ನ್ನು ನೀವು ಅಡ್ಜಸ್ಟ್ ಮಾಡಿ ಪಂಚಾಯಿತಿ ಹೆಡ್ ಕ್ವಾರ್ಟ್ರ್ಸ್‌ನಲ್ಲಿ ಪ್ರಾರಂಭ ಮಾಡಿದರೆ, ಅಮೇಲೆ ಗ್ರಾಮಗಳಿಗೆಲ್ಲಾ ಅಗತ್ಯವಿದೆಯೋ ಇಲ್ಲವೋ ಎನ್ನುವುದನ್ನು ಆಲೋಚನೆ ಮಾಡೋಣ ಎಲ್ಲೋ ಒಂದು ಕಡೆ ನಮ್ಮ ಹೃದಯ ಅವರ ಬಗ್ಗೆ ಕಾಳಜಿ ಮಾಡದೆ ಹೋದರೆ ಹೇಗೆ? ಜಿಲ್ಲಾ ಹೆಡ್‌ಕ್ವಾರ್ಟ್ರ್ಸ್ ನಲ್ಲಿಯೇ ಮಾಡಿಲ್ಲ ಎಂದು ಹೇಳುವುದು ಮಾಮೂಲು, ಅಧಿಕಾರಿಗಳು ಹೇಳಿಕೊಟ್ಟಿರುವ ಉತ್ತರ ಹೇಳುವುದು ಬೇಡ ನೀವು ಮಂತ್ರಿಗಳಾಗಿ, ನಿಮ್ಮ ಪ್ರಭಾವವನ್ನು ಸರ್ಕಾರದ ಮೇಲೆ ಬೀರಿ, ಸರ್ಕಾರದ ಆಲೋಚನೆಯನ್ನು ಪುನರ್‌ವಿಮರ್ಶೆ ಒಳಪಡಿಸಿ, ಹೌದು ಸರ್ ನೀವು ಹೇಳುವುದು ನಿಜ ನಮ್ಮ ಮಕ್ಕಳಿಗೆ ಅಷ್ಟು ಬೇಡವೇ? ನಾವು ಆ

ಸಮೂಹದಿಂದ ಬಂದವರು ನಮ್ಮ ಮಕ್ಕಳಿಗೆ ಕನಿಷ್ಠ ಅದಕ್ಕಾದರೂ ಅವಕಾಶವನ್ನು ಮಾಡಿಕೊಡಬೇಕು ಅದನ್ನು ಮಾಡುತ್ತೇನೆಂದು ಹೇಳಿದರೆ ನಮಗೆ ಸಮಾಧಾನವಾಗುತ್ತದೆ ಇಲ್ಲದೇ ಹೋದರೆ ನಾನೇನು ನಿಮಗೆ ಮುಜುಗರ ಮಾಡುವುದಿಲ್ಲ ನನ್ನ ಪಾಡಿಗೆ ನಾನು ಕುಳಿತುಕೊಳ್ಳುತ್ತೇನೆ

**ಶ್ರೀ ಎಸ್ ಎಸ್ ಪಾಟೀಲ್ (ಮುಂಡಗಿ)** -- ರಮೇಶ್ ಕುಮಾರ್‌ರವರು ಕೇಳಿದ ಪ್ರಶ್ನೆ ನಿಜವಾಗಿ ನಾವೆಲ್ಲರೂ ಚಿಂತನೆ ಮಾಡತಕ್ಕ ಪ್ರಶ್ನೆ ಹಿಂದೆ ಹಳ್ಳಿಗಾಡಿನಲ್ಲಿ ನಮ್ಮದು ಬಾವಿಗಳು ಇರುತ್ತಿದ್ದವು ಆಗ ನಾವೆಲ್ಲ ಈಜು ಕಲಿಯುತ್ತಿದ್ದೆವು ಇವತ್ತು ಬಾವಿಗಳೆಲ್ಲ ಒಣಗಿ ಹೋಗಿದೆ ಬೋರ್ ಹಾಕಿ ಕುಳಿತಿದ್ದೇವೆ ಹೀಗಾಗಿ ಹಳ್ಳಿಗಾಡಿನ ಮಕ್ಕಳಿಗೆ ಈಗ ಈಜೇ ಬರುವುದಿಲ್ಲ ಬಹುಶಃ ನನ್ನದೇ ಉದಾಹರಣೆಯನ್ನು ಹೇಳುತ್ತೇನೆ, ನಾನು ಹೊಳೆಯಲ್ಲಿ ಹೊರಟು ಹೋಗಿದ್ದೆ ಈಜು ಕಲಿತಿದ್ದರಿಂದ ಅದರಿಂದ ಪಾರಾಗಿ ಬಂದು ಇವತ್ತು ಎಂಎಲ್‌ಎ ಆಗಿದ್ದೇನೆ ಆ ಕಾರಣದಿಂದ ಹಳ್ಳಿಯಲ್ಲಿ ಯಾವ ವ್ಯವಸ್ಥೆಯೂ ಇಲ್ಲ ಆದ್ದರಿಂದ ದಯವಿಟ್ಟು ನೀವು ದೊಡ್ಡ ಊರಿನಲ್ಲಿ ಮಾಡಿದಂತೆ ಕೋಟಿಗಟ್ಟಲೆ ಖರ್ಚು ಮಾಡಿ ಹಳ್ಳಿಗಳಲ್ಲಿ ಮಾಡಬೇಕಾಗಿಲ್ಲ ನಮಗೆ ಅಲ್ಲಿ ಬಹಳ ರೊಕ್ಕವೇನೂ ಬೇಕಾಗುವುದಿಲ್ಲ ಕನಿಷ್ಟ ಒಂದು ಸಣ್ಣ ಬಾವಿ ರೀತಿ ಮಾಡಿ ಅದನ್ನು ಸ್ವಚ್ಛ ಮಾಡುವ ರೀತಿ ಮತ್ತು ಅದನ್ನು ತುಂಬುವ ಹಾಗೆ ಮಾಡಿಕೊಡಿ ಸಾಕು ಬಹುಶಃ ಅದನ್ನು ಒಂದೊಂದು ಲಕ್ಷ ರೂ ನಲ್ಲಿ ಮಾಡಬಹುದು ಎರಡು ಲಕ್ಷದಲ್ಲಿ ಮಾಡಬಹುದು ಸಾಕು ಅಷ್ಟೇ ಒಂದು ಕೋಟಿ ಖರ್ಚು ಮಾಡಿದರೆ ಎರಡು ಜಿಲ್ಲೆಗಳಲ್ಲಿಯೇ ಮಾಡಬಹುದು ಆ ರೀತ ಸಣ್ಣ ಬಾವಿಯನ್ನು ಮಾಡಿ ಮಕ್ಕಳಿಗೆ ಈಜಲು ಕಲಿಸಿದರೆ ಒಳ್ಳೆಯದು ಬಹಳ ಮಕ್ಕಳಿಗೆ ಈಜು ಬರುವುದಿಲ್ಲ ನೀವು ಹಳ್ಳಿಯಿಂದ ಬಂದಿರುವವರು ನಿಮಗೂ ಇದರ ಬಗ್ಗೆ ಗೊತ್ತಿದೆ ಆ ಕಾರಣದಿಂದ ಆ ರೀತಿಯಾಗಿ ಮಾಡುತ್ತೀರಾ ಎಂದು ಹೇಳಬೇಕು

**ಶ್ರೀ ಎನ್ ಎಸ್ ಭೋಸರಾಜು (ಮಾನ್ವಿ)** -- ಈಗಾಗಲೇ ಹಿರಿಯರು ಹೇಳಿದಂತೆ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಸಾಕಷ್ಟು hoteliers ಗಳು ಬಂದು ಖಾಸಗಿಯವರು ಬಂದು ಸಾಕಷ್ಟು ಈಜುಕೊಳಗಳನ್ನು ಮಾಡಿದ್ದಾರೆ ನಮ್ಮ ಮಂತ್ರಿಗಳು ಕ್ರೀಡಾಪಟುಗಳೂ ಕೂಡ ಆಗಿದ್ದಾರೆ ಈಗಾಗಲೇ ತಾಲ್ಲೂಕು ಮಟ್ಟದಲ್ಲಾದರೂ

ಪ್ರಾರಂಭ ಮಾಡಿ ಎಂದು ಅವರನ್ನು ನಾವು ಕೇಳಿಕೊಂಡಿದ್ದೇವೆ ಆದರೆ ಗ್ರಾಮಾಂತರ ಪ್ರದೇಶದಲ್ಲಿ ಯುವಕರಿಗೆ ಅವಕಾಶ ಕಲ್ಪಿಸತಕ್ಕ ಈಜುಕೊಳಗಳನ್ನು ತಕ್ಷಣ ತಾವು ಪ್ರಾರಂಭಿಸಬೇಕು ಈ ವರ್ಷದ ಬಜೆಟ್‌ನಲ್ಲಿ ಕೇವಲ ನೀವು ಜಿಲ್ಲಾ ಮಟ್ಟದಲ್ಲಿ ಏಳು ಜಿಲ್ಲೆಗಳಲ್ಲಿ ಮಾಡಿದ್ದೇವೆ, ಇನ್ನು 13 ಜಿಲ್ಲೆಗಳಲ್ಲಿ ಮಾಡಬೇಕೆಂದು ಇದ್ದೀರಿ ನಮ್ಮ ರಾಯಚೂರಿನಲ್ಲಿ ಸಹಿತ ಇವತ್ತಿನ ತನಕ ಈಜುಕೊಳಗಳನ್ನು ಪ್ರಾರಂಭಿಸಲು ಆಗಲಿಲ್ಲ ಆದರೂ head quarters ನಲ್ಲಿ hoteliers ರವರು ಕಟ್ಟಿಸಿದ್ದಾರೆ ನೀವು ಕನಿಷ್ಟ ನಮ್ಮ ಜಿಲ್ಲೆಗಾದರೂ ತಾವು ಮಂತ್ರಿಯಾಗಿದ್ದೀರಿ, ಅದನ್ನು ತಾಲ್ಲೂಕು ಪ್ರದೇಶದಿಂದ ಪ್ರಾರಂಭಿಸಲಿ ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ ಮತ್ತು ಹಿರಿಯರಾಗಿರತಕ್ಕ ಪ್ರಕಾಶ್‌ರವರು ಇದ್ದಾರೆ ಈಗ ನಾವೆಲ್ಲರೂ ಕ್ರೀಡಾ ಸಚಿವರ ಒಂದು ಚಟುವಟಿಕೆಗಳ ಬಗ್ಗೆ ಹೇಳುತ್ತಿದ್ದೇವೆ, ಈಜುಕೊಳಗಳನ್ನು ಪ್ರಾರಂಭ ಮಾಡುವುದಕ್ಕೆ ಮತ್ತು ಕ್ರೀಡಂಗಣವನ್ನು ಪ್ರಾರಂಭ ಮಾಡಲು ಹೇಳುತ್ತಿದ್ದೇವೆ ಅವರಿಗೆ ಈ ವರ್ಷ ಬಹಳಷ್ಟು ಕಡಿಮೆ ಬಜೆಟ್‌ನ್ನು ಕೊಟ್ಟಿದ್ದರೆ ಅವರಿಗೆ ಅಗೌರವ ಮಾಡತಕ್ಕ ರೀತಿಯಲ್ಲಿ ಆ ಒಂದು ಇಲಾಖೆಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ ಹಾಗಾಗಿ ಕನಿಷ್ಟ ಒಂದು ನೂರು ಕೋಟಿಯಾದರೂ ಆ ಇಲಾಖೆಗೆ ಕೊಡಿಸುವ ಕೆಲಸವನ್ನು ಮಾಡಬೇಕಾಗಿದೆ ಎಲ್ಲ ಕಡೆ ಸಾಕಷ್ಟು ಜನರು ಕೇಳುತ್ತಿದ್ದಾರೆ, ಬೇಡಿಕೆ ಇದೆ, ಮಕ್ಕಳಿಗೆ ನಾವೆಲ್ಲಾ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೀರಿ, ಹೊರಟ್ಟಿ ಸಾಹೇಬರು ಇದ್ದಾರೆ, ಅವರು ಸಹ ಪ್ರೌಢ ಶಾಲೆಗಳಿಗೆ ಅನುಕೂಲವನ್ನು ಮಾಡಿಕೊಡುತ್ತಿದ್ದಾರೆ ಪ್ರಾಥಮಿಕ ಶಾಲೆಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ ಜೂನಿಯರ್ ಕಾಲೇಜಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ, ಇಷ್ಟು ಕೆಲಸ ಆಗಬೇಕಾಗಿರುವಾಗ ಕೇವಲ ನಾಲ್ಕೂವರೆ ಕೋಟಿ ಹಣವನ್ನು ಕೊಟ್ಟರೆ ಅವರು ಯಾವ ರೀತಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆ? ರಾಯಚೂರು ಜಿಲ್ಲೆ ಹಿಂದುಳಿದ 27 ನೇ ಜಿಲ್ಲೆಯಾಗಿದೆ ಆ ಜಿಲ್ಲೆಗೆ ಅಗೌರವ ತರುವ ರೀತಿ ಇವತ್ತು ಬಜೆಟ್ ಅಲೊಕೇಷನ್ ಅನ್ನು ಮಾಡಿದ್ದಾರೆ ಹಾಗಾಗಿ ನಮ್ಮ ಜಿಲ್ಲೆಯ ಎಲ್ಲ ಜನತೆ ನಮ್ಮ ಮಂತ್ರಿಗಳಿಗೆ, ಆ ಇಲಾಖೆಗೆ ಕೊಟ್ಟಿರುವ ಹಣದ ಬಗ್ಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ ಆದ್ದರಿಂದ ತಾವು ಈ ಮಾತನ್ನು ಗಮನದಲ್ಲಿಟಡ್ಡುಕೊಂಡು ರಾಯಚೂರು ಜಿಲ್ಲೆಯಿಂದ ನಾವು ಸಾಕಷ್ಟು ಅನ್ನವನ್ನು ಕೊಡುತ್ತಿದ್ದೇವೆ, ಹಟ್ಟಿ

ಗೋಲ್ಡ್‌ಮೈನ್ಸ್‌ನಿಂದ ಸಾಕಷ್ಟು ಬಂಗಾರವನ್ನು ಕೊಡುತ್ತಿದ್ದೇವೆ ಕೆಪಿಸಿಎಲ್ ನಿಂದ 1400 ಮೆಗಾವ್ಯಾಟ್ ವಿದ್ಯುತ್ ಅನ್ನು ಕೊಡುತ್ತಿದ್ದೇವೆ ಈ ರೀತಿಯಾಗಿ ಅಲ್ಲಿಂದ ಇಡೀ ರಾಜ್ಯಕ್ಕೆ ಸಾಕಷ್ಟು ರೀತಿ ಅನುಕೂಲ ಆಗುವ ಸಂದರ್ಭದಲ್ಲಿ ನಮ್ಮ ಮಂತ್ರಿಗಳಿಗೆ ಮತ್ತು ಆ ಇಲಾಖೆಗೆ ಸಾಕಷ್ಟು ಕಡಿಮೆ ಹಣವನ್ನು ಕೊಟ್ಟು ಆ ಜಿಲ್ಲೆಗೆ ಅಗೌರವ ತಂದಿದ್ದಾರೆ ಎನ್ನುವ ಮಾತನ್ನು ನಾನು ನಮ್ಮ ಜಿಲ್ಲಾ ಜನತೆಯ ಭಾವನೆ ಆ ರೀತಿ ಇದೆ ಎನ್ನುವ ಮಾತನ್ನು ತಿಳಿಸುತ್ತೇನೆ

**ಶ್ರೀ ಆಲ್ಕೋಡ್ ವೈ ಹನುಮಂತಪ್ಪ** – ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಏನು ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ ಆದರೆ ಇವತ್ತಿನ ಏನು ಬಜೆಟ್‌ನಲ್ಲಿರತಕ್ಕ ಕೊಟ್ಟಿರುವ ಸೀಮಿತ ಹಣದಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲ ಸ್ವಲ್ಪ ಕಷ್ಟವಾಗುತ್ತದೆ ಅದಕ್ಕೆ ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಏನು ಹೇಳಬಯಸುತ್ತೇನೆಂದರೆ ಒಂದು ಈಜುಕೊಳವನ್ನು ಮಾಡಬೇಕಾದರೆ ಕನಿಷ್ಟ ಒಂದು ಕೋಟಿ ರೂ ಬೇಕಾಗುತ್ತದೆ ಒಂದು ಈಜುಕೊಳ ಮಾಡಬೇಕೆಂದರೆ ತಾವು ಹೇಳಿದಂತೆ ಒಂದು ಲಕ್ಷದಲ್ಲಿ ಆಗುತ್ತದೆ, ಎರಡು ಲಕ್ಷದಲ್ಲಿ ಆಗುತ್ತದೆ ಎಂದು ಹೇಳಿದರೆ ಅದಕ್ಕೆ ಒಂದು ಬೋರ್‌ವೆಲ್ ಅನ್ನು ಹಾಕಬೇಕಾಗುತ್ತದೆ ಅದಕ್ಕೆ 150 ಅಡಿಗಳಷ್ಟು ಬೇಕಾಗುತ್ತದೆ ಅದರ ಜೊತೆಗೆ ಅದಕ್ಕೆ ಫಿಲ್ಟರ್ ಪ್ಲಾಂಟ್ ಬೇಕಾಗುತ್ತದೆ ಬಟ್ಟೆಗಳನ್ನು ಚೆಂಜ್ ಮಾಡುವುದಕ್ಕೆ ಕನಿಷ್ಟ ಎರಡು ಖೋಲಿಗಳಾದರೂ ಬೇಕಾಗುತ್ತದೆ ಇವೆಲ್ಲಾ ಮಿನಿಮಮ್ ನೀವು ಗ್ರಾಮಾಂತರ ಪ್ರದೇಶದಿಂದ ಬಂದಿರುವವರು

**ಶ್ರೀ ಎಸ್ ಎಸ್ ಪಾಟೀಲ್** – ನೀವು ಹೊರಟ್ಟಿಯವರ ಕಡೆಯಿಂದ ಟ್ರೇನಿಂಗ್‌ಅನ್ನು ತೆಗೆದುಕೊಳ್ಳಿ ಎಷ್ಟು ಬುದ್ಧಿವಂತಿಕೆಯಿಂದ ಮಾಡಿ Un-aided ಶಾಲೆಗಳವರು ಇವತ್ತು Aided ಆಗಿ ಮಾಡಿಸಿಕೊಂಡರು ನೀವು ಆ ರೀತಿ ಸ್ವಲ್ಪ ಮ್ಯಾನೇಜ್ ಮಾಡಬೇಕಾಗುತ್ತದೆ ಮಂತ್ರಿಗಳು ಇದನ್ನು ಜಾಣ್ಮೆಯಿಂದ ಮಾಡಿಕೊಳ್ಳಿ ನಾವೆಲ್ಲರೂ ಸಪೋರ್ಟ್ ಮಾಡುತ್ತೇವೆ ಇಲ್ಲದಿದ್ದರೆ ಹಳ್ಳಿಯ ಯುವಕರಿಗೆ ಬರೀ ಕ್ರಿಕೆಟ್ ಆಡಿಸುವುದು, ಅವರಿಗೆ ಕುಡಿಯಲು ನೀರೂ ಇಲ್ಲವೆಂದರೆ ಹೇಗಾಗುತ್ತದೆ? ನಮಗೆ ಒಂದು ಕೋಟಿ ಬೇಡ ಅದೆಲ್ಲಾ ಮಾಡಲು ಹೋದರೆ ಇನ್ನು ನೂರು

ವರ್ಷವಾದರೂ ಮಾಡುವುದಕ್ಕಾಗುವುದಿಲ್ಲ ಈ ರಾಜ್ಯದಲ್ಲಿ ಅದಕ್ಕೆ ಒಂದು ಪ್ಲಾನ್ ಅನ್ನು ಮಾಡಿಸಿ ಪ್ರಯತ್ನ ಮಾಡಿ ಅಲ್ಲಿಯೇ ಇಬ್ಬರು ಸಚಿವರು ಕುಳಿತಿದ್ದಾರೆ ಇಬ್ಬರೂ ಸೇರಿಕೊಂಡು ಸಹಾಯ ಮಾಡಿ ಅವರಿಗೆ ಹಣವನ್ನು ಕೊಡಿಸಿ ಅದಕ್ಕೆ ಹಣವನ್ನೇ ಇಟ್ಟಿಲ್ಲ ಏನು ಮಾಡಬೇಕು ಆ ಮಂತ್ರಿಗಳು? ಎಲ್ಲೆಲ್ಲಿ ಕ್ರೀಡಾಂಗಣವನ್ನು ಮಾಡುತ್ತೇವೆಂದು ಹೇಳಿದ್ದರು, ಕಡೆಗೆ ಆ ಕ್ರೀಡಾಂಗಣಕ್ಕೆ ಹಣವನ್ನೇ ಇಲ್ಲವೆಂದರೆ ಪಾಪ ಅವರೇನು ಮಾಡಬೇಕು? ಕ್ರೀಡಾಂಗಣಕ್ಕೆ ಹಣ ಬೇಕು ನಿಮ್ಮದೂ ಕೂಡ ಅದಕ್ಕೆ ಸಂಬಂಧಪಟ್ಟಿದ್ದು ಬರೀ ನೀವು ಶಾಲೆ ಕಟ್ಟುವುದಲ್ಲ ಹುಡುಗರಿಗೆ ಆಟ ಆಡಲು ಬೇಕಲ್ಲ ನಿಮಗೂ ಆಟದ ಮೈದಾನ ಇಲ್ಲ ಅವರಿಗೂ ಇಬ್ಬರೂ ಕೂಡಿ ಸ್ವಲ್ಪ ಸಹಾಯವನ್ನು ಮಾಡಿ ಇಲ್ಲವೆಂದರೆ ಅದು ಆಗುವುದಿಲ್ಲ ಅವರು ಮಾಡುವುದಿಲ್ಲವೆಂದರೆ ನೀವು ಬಿಡಬೇಡಿ ಮಡುವುದಕ್ಕೆ ಸಾಧ್ಯ ಇದೆ ಎಂದು ಹೇಳಿ ನೀವು ಉತ್ತರವನ್ನು ಕೊಡಿ

**ಒಬ್ಬ ಮಾನ್ಯ ಸದಸ್ಯ** – 50 ವರ್ಷದಲ್ಲಿ ಜಿಲ್ಲಾ ಲೆವೆಲ್‌ನಲ್ಲೇ ಆಗಿಲ್ಲ ಇನ್ನು ಗ್ರಾಮ ಪಂಚಾಯಿತಿಯಲ್ಲಿ ಹೇಗೆ ಆಗುತ್ತದೆ?

**ಶ್ರೀ ಅಲ್ಕೋಡ್ ಹನುಮಂತಪ್ಪ** – ಮಾನ್ಯ ಭೋಸರಾಜು ಅವರು ತಾಲ್ಲೂಕು ಮಟ್ಟಕ್ಕಾದರೂ ಒಂದೊಂದು ಕೊಡಿ ಎಂದು ಅವರು ತಮ್ಮ ಭಾವನೆಯನ್ನು ವ್ಯಕ್ತಮಾಡಿದ್ದಾರೆ ಇದು ಉತ್ತಮವಾದ ಸಲಹೆ ಎಂದು ನಾನು ಭಾವಿಸುತ್ತೇನೆ ಮುಂದೆ ಇದನ್ನು ಸರ್ಕಾರ ನಾವೆಲ್ಲ ಕುಳಿತುಕೊಂಡು ಯೋಚನೆ ಮಾಡುತ್ತೇವೆ ಮಾನ್ಯ ಹಿರಿಯ ಸದಸ್ಯರಾದ ರಮೇಶ್‌ಕುಮಾರ್ ಹೇಳಿದ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ ಮಾನ್ಯ ಭೋಸರಾಜು ಅವರು ಹೇಳಿದ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ ಹಿರಿಯರಾಗಿರತಕ್ಕ ಪಾಟೀಲ್‌ರು ಹೇಳಿದ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ ಮುಂದೆ ಇದನ್ನು ಸರ್ಕಾರ ಪರೀಶೀಲಿಸುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ

**ಉಪಾಧ್ಯಕ್ಷರು** – ಮುಂದಿನ ಪ್ರಶ್ನೆ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಅವರು

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು –

**ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳನ್ನು ದುರುಸ್ತಿ ಮಾಡುವುದು**

**282 (1364) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)** – ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗೆ ಸರ್ಕಾರ ನಿಗದಿಪಡಿಸಿದ ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು, (ವಿವರ ನೀಡುವುದು)

ಆ) ಮುಂಡರಗಿ ಮತದಾರಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳೆಷ್ಟು ಕಿಲೋ ಮೀಟರ್‌ಗಳಿವೆ,

ಇ) ಅವುಗಳ ರಿಪೇರಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ,

ಈ) ಮೂರು ವರ್ಷಗಳಲ್ಲಿ ರಾಜ್ಯಹೆದ್ದಾರಿ ನಿರ್ವಹಣೆಯಡಿ ಮುಂಡರಗಿ ಮತದಾರ ಕ್ಷೇತ್ರದಲ್ಲಿ ರಾಜ್ಯಹೆದ್ದಾರಿ ನಿರ್ವಹಣೆಗಾಗಿ ತೆಗೆದುಕೊಂಡ ರಸ್ತೆಗಳಾವುವು ಹಾಗೂ ಅವುಗಳ ರಿಪೇರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು).**

ಅ) 2006–07ನೇ ಸಾಲಿನಲ್ಲಿ ಲೆ ಶೀ 3054 – ರಸ್ತೆ ಮತ್ತು ಸೇತುವೆ (ಯೋಜನೆ)– ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ರೂ 13271 00 ಲಕ್ಷಗಳ ಅನುದಾನವನ್ನು ಜಿಲ್ಲಾ ಮುಖ್ಯರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಹಾಗೂ ಪೂರಕ ಆಯವ್ಯಯದಲ್ಲಿ ರೂ 15000 00 ಲಕ್ಷಗಳನ್ನು ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ನಿಗದಿಪಡಿಸಲಾಗಿದ್ದು, ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಲೆ ಶೀ 3054 – ಯೋಜನೇತರ – 12ನೇ ಹಣಕಾಸು ಆಯೋಗದಡಿಯಲ್ಲಿ ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗಾಗಿ ರೂ 14615 00 ಲಕ್ಷಗಳನ್ನು